# ಆಪ್ತ ಸಲಹೆ ಮಾಹಿತಿ ಪುಸ್ತಕ ಬಿಡುಗಡೆ

ಬೆಂಗಳೂರು: ಮಕ್ಕಳು ಮತ್ತು ಕುಟುಂಬಗಳ ಬೆಂಬಲಕ್ಕೆ ನಿಲ್ಲಬೇಕೆಂಬ ಉದ್ದೇಶದೊಂದಿಗೆ ಕಳೆದ ಎಂಟು ವರ್ಷಗಳಿಂದ ಆಪ್ತ ಸಲಹಾ ಕ್ಷೇತ್ರದಲ್ಲಿ ದುಡಿಯುತ್ತಿರುವ ಮೀರಾ ರವಿಯವರು ರಚಿಸಿರುವ 'ಆಪ್ತ ಸಲಹೆ-ಏನು, ಏಕೆ ಮತ್ತು ಹೇಗೆ?' ಪುಸ್ತಕದ ಬಿಡುಗಡೆ ಸಮಾರಂಭವನ್ನು ಇತ್ತೀಚೆಗೆ ಮಿಥಿಕ್ ಸೊಸೈಟಿಯಲ್ಲಿ ಏರ್ಪಡಿಸಲಾಗಿತ್ತು.

ವೈದ್ಯಕೀಯ ಶಿಕ್ಷಣ ಕಾರ್ಯದರ್ಶಿ ಎಂ.ಎಸ್. ವಿದ್ಯಾಶಂಕರ್ ಪುಸ್ತಕ ಬಿಡುಗಡೆ ಮಾಡಿದರು.

'ಆಪ್ತ ಸಲಹೆ ಬಗ್ಗೆ ಅನೇಕ ತಪ್ಪು ಕಲ್ಪನೆಗಳಿವೆ ಎಂಬುದು ನನಗೆ ತಿಳಿದಿದೆ. ಆದ್ದರಿಂದ ಈ ಪುಸ್ತಕದ ಪ್ರಮುಖ ಉದ್ದೇಶ ಜನರಿಗೆ ಆಪ್ತ ಸಲಹೆ ಎಂದರೇನು? ಮತ್ತು ಯಾವುದು ಆಪ್ತ ಸಲಹೆಯಲ್ಲ ಎಂದು ತಿಳಿಸುವುದು. ಆಪ್ತ ಸಲಹೆ ಬಗ್ಗೆ ತಿಳಿದುಕೊಳ್ಳಲು ಬಯಸಿದಂಗೆ ಪುಸ್ತಕ ಕೈಪಿಡಿಯಾಗಿ ಸಹಾಯ ಮಾಡುತ್ತದೆ.'

ಆಪ್ತ ಸಲಹೆ ಎಂದರೇನು?, ಸಾಮಾನ್ಯ ವ್ಯಕ್ತಿಗಳಿಗೆ ಆಪ್ತ ಸಲಹೆಯ ಅಗತ್ಯವಿದೆಯೇ?, ಆಪ್ತ ಸಲಹೆಯ ಪ್ರಯೋಜನಗಳು, ಆಪ್ತ ಸಲಹೆ ಪಡೆಯುವ ವ್ಯಕ್ತಿಯ ಹಕ್ಕು ಬಾಧ್ಯತೆಗಳು, ಆಪ್ತಸಲಹೆಯ ಮೂಲಕ ಪರಿಹರಿಸಬಹುದಾದ ಸಮಸ್ಯೆಗಳಾವುವು?, ಒಬ್ಬ ಆಪ್ತ ಸಲಹೆಗಾರರನ್ನು ಆಯ್ಕೆ ಮಾಡಿಕೊಳ್ಳುವುದು ಹೇಗೆ? ಮನೋಪ್ರೇರಿತ ದೈಹಿಕ ರೋಗಗಳು ಮತ್ತು ಇತರ ವಿಷಯಗಳು ಈ ಪುಸ್ತಕದಲ್ಲಿವೆ ಎಂದು ಲೇಖಕಿ ಮೀರಾ ಪುಸ್ತಕದ ಬಗ್ಗೆ ಹೇಳಿದರು.

ಮೀರಾ ಅವರ ಇನ್ನೆರಡು ಪುಸ್ತಕಗಳಾದ 'ಅಧ್ಯಯನ ಕೌಶಲ್ಯಗಳ ಮಾರ್ಗದರ್ಶಿ' ಮತ್ತು 'ಹೃದಯದ ಮೂಲಕ ಬೋಧನೆ' ಪುಸ್ತಕಗಳನ್ನು ವಿವಾ ಬುಕ್ಸ್, ನವದೆಹಲಿ ಪ್ರಕಟಿಸಿದೆ. ಈ ಪುಸ್ತಕಗಳು ವಿದ್ಯಾರ್ಥಿ ಹಾಗೂ ಶಿಕ್ಷಕರಿಗೆ ಉಪಯೋಗವಾಗುವ ಮೂಲಕ ಅತ್ಯಂತ ಯಶಸ್ವಿಯಾಗಿವೆ.

ವಿಳಾಸ: ನಂ.34/4, 3ನೇ ಮುಖ್ಯ ರಸ್ತೆ, 38ನೇ 'ಎ' ಅಡ್ಡರಸ್ತೆ, 8ನೇ ಬಡಾವಣೆ, ಜಯನಗರ.

ದೂರವಾಣಿ: 26566808, ಮೊಬೈಲ್: 9980072005. ಇಮೇಲ್: www.preranaacademy.com



'ಆಪ್ತ ಸಲಹೆ-ಏನು, ಏಕೆ ಮತ್ತು ಹೇಗೆ?' ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಲೇಖಕಿ ಮೀರಾ ರವಿ, ಎಂ.ಎಸ್. ವಿದ್ಯಾಶಂಕರ್ ಮತ್ತಿತರರು ಹಾಜರಿದ್ದರು.

Vijaya Karnataka (09/10/06)